ತಿಮ್ಮ ಎಲ್ಲೊ ಹೊರಟು ಅಂಗಿ ನೇತಾಕ್ಕಂಡಿದ್ದವನು, ಅದನ್ನ ಕ್ಯಾನ್ಸಲ್ ಮಾಡಿ ಇನ್ನೇನು ಅಂಗಿ ಕಳಚಾಕುವುದರಲ್ಲಿದ್ದ. ಇಂದು ತಾನು ಹೊರಟಿದ್ದ ಕೆಲಸವೂ ಮುಖ್ಯವಾದದ್ದೆ ಆಗಿತ್ತು. ವರ್ಸೆಯಲ್ಲಿ ಭಾಮ್ಮೈದನೇ ಆಗ್ಬೇಕಿದ್ದ ತನ್ನ ಹೆಂಡ್ತಿಕಡೆ ಸಂಬಂಧದವನೊಬ್ಬನಿಗೆ ದನ ಕೊಡ್ಸಕೆ ಹೊಲ್ಟು ನಿಂತಿದ್ದ. ಆದ್ರೆ, ಈಗಷ್ಟೆ ಬಂದ ಒಂದು ಫೋನ್ ಕಾಲು ಇದನ್ನು ಅದಕ್ಕಿಂತಲೂ ಮುಖ್ಯದ್ದಾಗಿಸಿ ಅಂಗಿ ಕಳಚಾಕುವಂತೆ ಮಾಡಿತ್ತು.

ತಿಮ್ಮನ ಅಪರೂಪದ ಮಿತ್ರ ಮಲ್ಲಿಯಿಂದ ಬಂದ ಫೋನ್ ಕಾಲು ಇಂದು ತನ್ನೆಲ್ಲ ಕೆಲಸವನ್ನು ಬದಿಗೊತ್ತುವಂತೆ ಮಾಡಿತ್ತು. ತಿಮ್ಮ ವಾರಕ್ಕೆ, ಹದಿನೈದು ದಿನಕ್ಕೆ ಈ ಸಂಬಂಧವಾಗಿ ಮಲ್ಲಿಗೆ ಫೋನ್ ಮಾಡಿ ವಿಚಾರಿಸುತ್ತಲೇ ಇರುತ್ತಿದ್ದ. ಆದರೆ, ಮಲ್ಲಿಯಿಂದ ಬರುತ್ತಿದ್ದ 'ಇನ್ನು ಸಿಕ್ಕಿಲ್ಲ ತಡ್ರಿ' ಎಂಬ ಪ್ರತ್ಯುತ್ತರ ತಿಮ್ಮನನ್ನು ನಿರಾಶೆಯ ಅಂಚಿಗೆ ತಳ್ಳಿತ್ತು. ಆದರೆ, ಇಂದು ಬೆಳ್ಳಂ ಬೆಳಗ್ಗೆ ಮಲ್ಲಿಯ ಕರೆ ತಿಮ್ಮನ ರಬ್ಬರ್ ಸುತ್ತಿರುವ ಹ್ಯಾಂಡ್ ಸೆಟ್ ಮೊಬೈಲ್‌ಗೆ ಬಂದಾಗ ತಿಮ್ಮನ ಕಲ್ಪನೆಗಳು ಗರಿ ಬಿಚ್ಚಿ ಹಾರಾಡಿದ್ದವು. ಹೌದು ತಿಮ್ಮನ ಎಣಿಕೆ ಸುಳ್ಳಾಗಿರಲಿಲ್ಲ. ಇಂದು ಮಲ್ಲಿಯ ಬೇಟೆಯಲ್ಲಿ ತಾನು ಬಯಸಿದ್ದೆ ಸಿಕ್ಕಿತ್ತು.

ಮಲ್ಲಿ ಬೇಟೆಯಾಡುವುದರಲ್ಲಿ ಪರಿಣತ. ಅವನಿದ್ದುದು ತೋಪಿನ ತೋಟದ ಮನೆಯಲ್ಲಿ. ಅಲ್ಲಿ ಕುರಿಗಳನ್ನೂ ಸಾಕಿದ್ದರಿಂದ ಮೊದಲಿಂದಲೂ ತನ್ನ ಹಾಗು ಕುರಿಗಳ ರಕ್ಷಣೆಗೆಂದು ಒಂದು ನಾಡ ಬಂದೂಕು ಇಟ್ಟುಕೊಂಡಿದ್ದ. ಆದರೆ, ಅದನ್ನ ಮಡಗಿಕೊಳ್ಳುವುದರ ಬಗ್ಗೆ ಸರ್ಕಾರದ ವತಿಯಿಂದ ಅನಂತರದಲ್ಲಿ ತಂಟೆ ತಕರಾರು ಬಂದಾಗ, ಅವರಿವರ ಕೈಕಾಲಿಡಿದು ಅದಕ್ಕೇ ಒಂದು ಲೈಸೆನ್ಸ್ ಗಿಟ್ಟಿಸಿಕೊಂಡಿದ್ದ.

ವಾರಕ್ಕೆ, ಹದಿನೈದು ದಿನಕ್ಕೆ ಅದನ್ನ ಹೆಗಲಿಗೇರಿಸಿಕೊಂಡು ತನ್ನ ಸೆಕೆಂಡ್ ಹ್ಯಾಂಡ್ ಟಿವಿಎಸ್ ಮೇಲೆ ಬುರ್‍ರನೆ ಹೋಗುತ್ತಿದ್ದರೆ ಯಾರಾದರೂ ಊಹಿಸುತ್ತಿದ್ದರು, ಇಂದು ಮಲ್ಲಿಗೆ ಮೊಲವೋ ಉಡವೋ ಗ್ಯಾರಂಟಿ ಎಂದು.

ಮಲ್ಲಿ ಕಾಡಂದಿ ಹೊಡೆಯದ್ರಲ್ಲು ತನ್ನ ಕೌಶಲ್ಯ ಮೆರೆಯುತ್ತಿದ್ದನಾದರೂ... ಅವು ಬೀಳುತ್ತಿದ್ದುದು ಮಾತ್ರ ಅಪರೂಪಕ್ಕೆಂಬಂತೆಯೇ. ಒಬ್ಬೊಂಟಿ ಎಂಬ ಕಾರಣಕ್ಕೆ ಅದರ ಬೇಟೆಗೆ ಹೆಚ್ಚಿಗೆ ತಲೆಕೆಡಿಸಿಕೊಂಡಿರಲಿಲ್ಲವೋ ಅಥವಾ ಅದನ್ನ ತಾನು ಅಷ್ಟಾಗಿ ಉಪಯೋಗ್ಸಲ್ಲ ಎಂಬ ಕಾರಣಕ್ಕೊ ಮಲ್ಲಿಗೆ ಕಾಡಂದಿ ಬೇಟೆ ಅಪಥ್ಯವೇ ಆಗಿತ್ತು.

ಆದರೆ, ತಿಮ್ಮನಿಗೆ ಅದೆಂದರೆ ಪಂಚಪ್ರಾಣ. ಎಲ್ಲಾದರೂ ಸರಿಯೆ ಹುಡುಕಿ ತಿನ್ನಬೇಕು. ತಿಮ್ಮ–ಮಲ್ಲಿ ಅನಾದಿ ಕಾಲದಿಂದಲೂ ಅಂದರೆ, ಅವರಿವರ ತೋಟಗಳಿಗೆ ನುಗ್ಗಿ ಕಳ್ಳಾಯಿ ಕೀಳ್ತಿದ್ದ ಕಾಲದಿಂದಲೂ ಸ್ನೇಹಿತರೆ. 'ಅದೆಲ್ಲ ಮುಗಿದೋದ ಕಾಲ' ಎಂದು ಅಪರೂಪಕ್ಕೂ ನೆನಪಿಸಿಕೊಳ್ಳದ, ಮದುವೆ ಮುಂಜಿ ಆಗಿರುವ ಈ ಕಾಲದಲ್ಲೂ ಈರ್ವರ ಸ್ನೇಹವನ್ನ ಅಷ್ಟೋ ಇಷ್ಟೊ ಹೀಗೆ ಹಿಡಿದು ನಿಲ್ಲಿಸಿದ್ದು ಈ ಬಾಡು ಬಳ್ಳಿ ಸಂಬಂಧವೆ.

ಮಲ್ಲಿಯ ಕರೆ ಬಂದಾಗಿನಿಂದಲೇ... ಹೆಂಡ್ರು ಶಂಕ್ರಿಗೆ ಬೆಳ್ಳುಳ್ಳಿ ಸುಳ್ಕ, ಈರುಳ್ಳಿ ಗೆಜ್ಜ ಎಂದು ತಿಮ್ಮ ಹೇಳಲು ಶುರುವಿಕ್ಕಿಕೊಂಡಿದ್ದ. ತವರು ಸಂಬಂಧದವರಿಗೆ ದನ ಕೊಡ್ಸಕೆ ಹೊಲ್ಟಿದ್ದವನು ಅಂಗಿ ಕಳ್ಚಾಕೆವ್ನಲ್ಲ ಎಂಬ ಸಿಟ್ಟು ಶಂಕ್ರಿಯ ಉದಾಸೀನಕ್ಕೆ ಕಾರಣವಾಗಿತ್ತು.

ಹೀಗೆ ಗೊಣಗಾಡುತ್ತಿರುವಾಗಲೇ ಮಲ್ಲಿಯ ಕುಟು ಕುಟು ಟಿವಿಎಸ್ ಮನೆ ಮುಂದೆ ಬಂದಿಳಿಯಿತು. ಉತ್ಸಾಹದಿಂದ ಆಚೆ ಬಂದ ತಿಮ್ಮನಿಗೆ ಮಲ್ಲಿ ಇವತ್ತು ಬಂದೂಕು ಬೆರಸೆ ಬಾರದಿರುವುದು ಒಂದಿಷ್ಟು ಸಮಾಧಾನಿಸಿ, 'ಬಾರೊ ಮಲ್ಲಿ ಒಳಿಕೆ, ಟಿ ಕುಡಿಯನ' ಎಂದು ಕರೆದ. ಮಲ್ಲಿ ತರಾತುರಿಯಲ್ಲಿದ್ದನಾದರೂ ಪೊಟ್ಟಣ ಕಟ್ಟಿರುವ ಮಾಂಸ ಕೊಡಲಿಕ್ಕಾದರೂ ಒಳ ಹೋಗಲೇ